## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
## ಸಿ.ಸಿ.1767/2024

| | | |
|---|---|---|
| ಸಾಕ್ಷಿದಾರರ ಹೆಸರು | : ಲೋಕೇಶ್ ಸಿ. | ಫ್ರಾಸಾ-3 |
| ತಂದೆಯ ಹೆಸರು | : ಚಂದ್ರಶೇಖರಯ್ಯ | ಚಾಸಾ-11 |
| ವಯಸ್ಸು | : 49 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಅಬಕಾರಿ ನಿರೀಕ್ಷಕರು | ದಿನಾಂಕಃ 01.12.2025. |
| ವಾಸಸ್ಥಳ | : ಪುತ್ತೂರು ವಲಯ | |

### :ಮುಖ್ಯ ವಿಚಾರಣೆಃ ಫ್ರಾಜ್ಞಾಸ.ಸ.ಅ. ರವರಿಂದ:

ನಾನು ಮೇ 2021 ರಿಂದ ದಿ.26.09.2025 ರವರೆಗೂ ಮೂಡಿಗೆರೆ ಉಪವಿಭಾಗದ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.25.06.2024 ರಂದು ಪ್ರಕರಣದ ಕಡತವನ್ನು ಚಾಸಾ-10 ರವರಿಂದ ಮುಂದಿನ ತನಿಖೆ ಸಂಬಂಧ ಸ್ವೀಕರಿಸಿಕೊಂಡು ದಿ.08.07.2024 ರಂದು ಪ್ರಕಣದಲ್ಲಿ ವಶಪಡಿಸಿಕೊಂಡ ವಾಹನದ ಮಾಲೀಕರಾದ ಜಯರಾಮ್ ಎನ್ನುವವರಿಗೆ ನೋಂದಾಯಿತ ಅಂಚೆ ಮೂಲಕ ನೋಟೀಸು ಕಳುಹಿಸಿದ್ದು, ಸದರಿ ನೋಟೀಸು ದಿ.13.07.2024 ರಂದು ಜಾರಿಯಾಗದೇ ವಾಪಸ್ಸಾಗಿರುತ್ತದೆ. ದಿ.23.07.2024 ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ದಿ.09.09.2024 ರಂದು ಸದರಿ ವಾಹನ ಮಾಲೀಕರಿಗೆ ಖುದ್ದು ನೋಟೀಸು ಜಾರಿ ಮಾಡುವಂತೆ ಚಾಸಾ-4 ರವರಿಗೆ ಜ್ಞಾಪನ ನೀಡಿ ಕಳುಹಿಸಿಕೊಟ್ಟಿದ್ದು, ಸದರಿರವರು ದಿ.11.09.2024 ರಂದು ಸ್ಥಳಕ್ಕೆ ಬೇಟಿ ನೀಡಿ ಅಲ್ಲಿ ವಾಹನದ ಮಾಲೀಕರು ಪತ್ತೆಯಾಗದ ಕಾರಣ ಸ್ಥಳೀಯರನ್ನು ವಿಚಾರಿಸಿ ಮಹಜರ್ ಕ್ರಮ ಜರುಗಿಸಿಕೊಂಡು ಬಂದು ದಿ.12.09.2024 ರಂದು ನನ್ನ ಮುಂದೆ ವರದಿ ನೀಡಿರುತ್ತಾರೆ. ದಿ.23.09.2024 ರಂದು ಆರೋಪಿಯ ಸ್ವ ಇಚ್ಛಾ ಹೇಳಿಕೆ ದಾಖಲಿಸಿಕೊಂಡು ಆರೋಪಿಯ ವಿರುದ್ಧ ದೋ.ಪ. ಸಲ್ಲಿಸಿಕೊಂಡಿರುತ್ತೇನೆ.

ಸಾಕ್ಷಿಯು ನಿಪಿ-7 ರ ರಾಸಾಯನಿಕ ಪರೀಕ್ಷಾ ವರದಿಯಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.08.07.2024 ರ ನೋಟೀಸು, ಜಾರಿಯಾಗದ ಅಂಚೆ ಲಕೋಟೆ, ದಿ.09.09.2024 ರ ಜ್ಞಾಪನ, ದಿ.11.09.2024 ರ ಮಹಜರ್, ದಿ.11.09.2024 ರ ವರದಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-8 ರಿಂದ 12, ಸಾಕ್ಷಿಯ ಸಹಿಗಳನ್ನು ನಿಪಿ-8(ಎ), 10(ಎ) ಮತ್ತು 12(ಎ) ಎಂದು ಗುರುತಿಸಲಾಯಿತು. ಆರೋಪಿಯು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸುತ್ತಾರೆ.

### ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ.ಕೆ.ಪಿ.ವಕೀಲರಿಂದಃ

ಜಯರಾಮ್ ರವರಿಗೆ ನೋಟೀಸು ಕಳುಹಿಸಿದ್ದೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಿಪಿ-7 ರ ವರದಿಯನ್ನು ಸ್ವೀಕರಿಸಿಕೊಂಡಿದ್ದೇನೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನೋಟೀಸು ಜಾರಿಗಾಗಿ ನಾನು ಸಿಬ್ಬಂದಿಯನ್ನು ಕಳುಹಿಸಿಕೊಡದೇ ನಾನು ನಿಪಿ-8 ರಿಂದ

12 ರ ದಾಖಲೆಗಳನ್ನು ಪ್ರಕರಣಕ್ಕೋಸ್ಕರ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಯಾವುದೇ ಆರೋಪಣೆ ಸಾಭೀತಾಗದೇ ಇದ್ದರೂ ಇಲಾಖಾ ಅಂಕಿಅಂಶಕ್ಕೋಸ್ಕರ ಸುಳ್ಳು ದೋ.ಪ. ಸಲ್ಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.